

'ಮುಂಗಾರುಮಳೆ'ಯ ಗಣೇಶ

ನಟಿಸಿದ್ದ ಈ ಚಿತ್ರ ಲಂಡನ್‌ನಲ್ಲಿ ನಡೆದ ಕಾಮನ್‌ವೆಲ್ತ್ ಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡಿತ್ತು.

ವಿಜಯಾ ಸಂಸ್ಥೆಯ 'ಸತ್ಯ ಹರಿಶ್ಚಂದ್ರ' 1965ರಲ್ಲಿ ತೆರೆ ಕಂಡಿತು. ಹುಣಸೂರು ಕೃಷ್ಣಮೂರ್ತಿ ಅವರ ಸಾಹಿತ್ಯ, ನಿರ್ದೇಶನದ ಹರಿಶ್ಚಂದ್ರ ಕನ್ನಡದ ಅತ್ಯುತ್ತಮ ಚಿತ್ರಗಳಲ್ಲೊಂದು. ರಾಜ್, ಪಂಢರಿಬಾಯಿ, ಉದಯಕುಮಾರ್, ನರಸಿಂಹರಾಜು, ಎಂ.ಪಿ.ಶಂಕರ್ ಮುಖ್ಯ ಭೂಮಿಕೆಯಲ್ಲಿದ್ದ ಈ ಚಿತ್ರವನ್ನು ನಾಲ್ಕು ದಶಕಗಳ ನಂತರ ನಿರ್ಮಾಪಕ ಕೆ.ಸಿ.ಎನ್.ಗೌಡ ಅವರು ಬಣ್ಣದ ಚಿತ್ರವಾಗಿ ರೂಪಾಂತರಿಸಿದ್ದೂ ಇತಿಹಾಸದ ವಿಶಿಷ್ಟ ಪ್ರಸಂಗಗಳಲ್ಲೊಂದು.

'ಕಸ್ತೂರಿ ನಿವಾಸ' (1973) ಕಲಾವಿದನಾಗಿ ರಾಜ್‌ಕುಮಾರ್‌ಗೆ ಹೊಸ ಪ್ರಭಾವಳಿಯನ್ನು ತಂದುಕೊಟ್ಟ ಸಿನಿಮಾ. ಈ ಚಿತ್ರದ ನಿರ್ದೇಶಕರಾದ ದೊರೆ–ಭಗವಾನ್, ರಾಜ್ ಅವರ ಅನೇಕ ಚಿತ್ರಗಳನ್ನು ನಿರ್ದೇಶಿಸಿದರು.

ಹೀಗೆ, ಏಳು ಬೀಳುಗಳ ನಡುವೆ ಸಾಗುತ್ತಾ ಬಂದಿರುವ ಕನ್ನಡ ಚಿತ್ರರಂಗದ ಬೆಳವಣಿಗೆಯಲ್ಲಿ ಮಿಂಚಿದ ತಾರೆಯರೂ ಅನೇಕ. ಜತೆಗೆ ತೆರೆಮರೆಯ ಸಾಧಕರ ದೊಡ್ಡ ಪಟ್ಟಿಯೂ ಇದೆ. ಈ ನಿಟ್ಟಿನಲ್ಲಿ ಹೊನ್ನಪ್ಪ ಭಾಗವತರ್, ಅಂಬರೀಷ್, ಶ್ರೀನಾಥ್, ಅನಂತನಾಗ್, ಶಂಕರ್‌ನಾಗ್ ಅವರಂಥ ವರ್ಚಸ್ವೀ ಕಲಾವಿದರನ್ನು ನೆನಪಿಸಿಕೊಳ್ಳಬಹುದು. ಈ ಹೊತ್ತಿನ ರವಿಚಂದ್ರನ್, ಶಿವರಾಜ್‌ಕುಮಾರ್, ಉಪೇಂದ್ರ, ರಮೇಶ್ ಅರವಿಂದ್, ಜಗ್ಗೇಶ್, ಪುನೀತ್ ರಾಜ್‌ಕುಮಾರ್, ಸುದೀಪ್, ದರ್ಶನ್, ಯಶ್, ಗಣೇಶ್ – ಇವರೆಲ್ಲ ಕನ್ನಡ ಚಿತ್ರರಂಗದಲ್ಲಿ ತಮ್ಮದೇ ಆದ ಸ್ಥಾನವನ್ನು ಗುರ್ತಿಸಿಕೊಂಡಿದ್ದಾರೆ. ಸರೋಜಾದೇವಿ, ಕಲ್ಪನಾ, ಭಾರತಿ, ಆರತಿ, ಮಂಜುಳಾ, ಲೀಲಾವತಿ, ಜಯಂತಿ, ಜಯಮಾಲ, ರಮ್ಯಾ, ಸುಧಾರಾಣಿ, ಶ್ರುತಿ, ಮಾಲಾಶ್ರೀ ಅವರಿಂದ ತೊಡಗಿ ರಾಧಿಕಾ ಪಂಡಿತ್, ಶ್ರುತಿ ಹರಿಹರನ್, ಶ್ರದ್ಧಾ ಶ್ರೀನಾತ್‌ರವರೆಗೆ ಕನ್ನಡ ಸಿನಿಮಾಗಳ ಸೊಗಡು–ಸೊಬಗನ್ನು ಹೆಚ್ಚಿಸಿದ ಕಲಾವಿದೆಯರ ಪಟ್ಟಿಯೂ ದೊಡ್ಡದಿದೆ.

ರವಿಚಂದ್ರನ್ ಅವರ 'ಪ್ರೇಮಲೋಕ', 'ಶಾಂತಿಕ್ರಾಂತಿ', ಶಿವರಾಜ್ ಕುಮಾರ್ ಅವರ 'ಜನುಮದ ಜೋಡಿ', ಉಪೇಂದ್ರರ 'ಓಂ' ಹಾಗೂ 'ಉಪೇಂದ್ರ', ಗಣೇಶ್ ಅಭಿನಯದ 'ಮುಂಗಾರು ಮಳೆ' – ಇವೆಲ್ಲ ಕನ್ನಡ ಚಿತ್ರೋದ್ಯಮದ ವರ್ಣರಂಜಿತ ಅಧ್ಯಾಯಗಳೇ ಆಗಿವೆ.

ಪಂತುಲು, ಪುಟ್ಟಣ್ಣ, ಸಿದ್ದಲಿಂಗಯ್ಯನವರ ಪರಂಪರೆಯಲ್ಲಿ ಈ ಹೊತ್ತಿನ ಯೋಗರಾಜ ಭಟ್ ('ಗಾಳಿಪಟ'), ಸೂರಿ ('ದುನಿಯಾ'), ಗುರುಪ್ರಸಾದ್ ('ಮಠ'), ವಿಜಯಪ್ರಸಾದ್ ('ನೀರ್ ದೋಸೆ') ಅವರನ್ನೂ ನೆನಪಿಸಿಕೊಳ್ಳಬೇಕು.

## ಭಾರತೀಯ ಚಿತ್ರರಂಗಕ್ಕೆ ವಿಶಿಷ್ಟ ಕೊಡುಗೆ

ವ್ಯಾಪಾರಿ ನೆಲೆಗಟ್ಟಿನಲ್ಲಿ ಭಿನ್ನ ಕಥನಗಳನ್ನು ನಿರೂಪಿಸುತ್ತಿದ್ದ ಕನ್ನಡ ಚಿತ್ರರಂಗ, 1970ರ ದಶಕದಲ್ಲಿ ಇಡೀ ಭಾರತೀಯ ಚಿತ್ರರಂಗ ತನ್ನೆಡೆಗೆ ತಿರುಗಿ ನೋಡುವಂತಹ ವಿಶಿಷ್ಟ ಚಿತ್ರಗಳನ್ನು ತಯಾರಿಸಿತು. ಪಟ್ಟಾಭಿರಾಮ ರೆಡ್ಡಿ ನಿರ್ದೇಶನದ 'ಸಂಸ್ಕಾರ' (1970) ಕನ್ನಡದಲ್ಲಿ ಹೊಸ ಅಲೆಯ ಚಿತ್ರಗಳಿಗೆ ಮುನ್ನುಡಿ ಬರೆಯಿತಲ್ಲದೆ, ಭಾರತೀಯ ಚಿತ್ರರಂಗವನ್ನೂ ಪ್ರಭಾವಿಸಿತು. ಯು.ಆರ್.ಅನಂತಮೂರ್ತಿ ಅವರ 'ಸಂಸ್ಕಾರ' ಕಾದಂಬರಿಯನ್ನು ಆಧರಿಸಿದ ಚಿತ್ರಕ್ಕೆ ಗಿರೀಶ ಕಾರ್ನಾಡರು ಚಿತ್ರಕಥೆ ಬರೆದರೆ, ರಾಜೀವ ತಾರಾನಾಥ ಸಂಗೀತ ನೀಡಿದರು. ಛಾಯಾಗ್ರಹಣ ಆಸ್ಟ್ರೇಲಿಯಾದ ಟಾಮ್ ಕಾವನ್ ಅವರದು. ಗಿರೀಶ ಕಾರ್ನಾಡ, ಲಂಕೇಶ್ ತಾರಾಗಣದಲ್ಲಿದ್ದ 'ಸಂಸ್ಕಾರ' ಸ್ವರ್ಣಕಮಲ ರಾಷ್ಟ್ರಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳನ್ನು ಪಡೆಯಿತು.

1972ರಲ್ಲಿ ತೆರೆ ಕಂಡ, ಎಸ್.ಎಲ್. ಭೈರಪ್ಪನವರ ಕಾದಂಬರಿ ಆಧರಿಸಿದ 'ವಂಶವೃಕ್ಷ' ಚಿತ್ರವನ್ನು ಗಿರೀಶ ಕಾರ್ನಾಡ ಮತ್ತು ಬಿ.ವಿ.ಕಾರಂತ ಜಂಟಿಯಾಗಿ ನಿರ್ದೇಶಿಸಿದರು. ನಿರ್ದೇಶನಕ್ಕಾಗಿ ಇಬ್ಬರಿಗೂ ರಾಷ್ಟ್ರಪ್ರಶಸ್ತಿ ದೊರೆಯಿತು. 'ನಾಗರಹಾವು' ಚಿತ್ರದಲ್ಲಿ ನಾಯಕನಾಗಿ ನಟಿಸುವ ಮೊದಲು 'ವಂಶವೃಕ್ಷ'ದ ಪುಟ್ಟ ಪಾತ್ರವೊಂದರಲ್ಲಿ ವಿಷ್ಣುವರ್ಧನ್ ನಟಿಸಿದ್ದರು.

ಬಿ.ವಿ. ಕಾರಂತ ನಿರ್ದೇಶನದ 'ಚೋಮನ ದುಡಿ' ಕನ್ನಡದ ಹೊಸ ಅಲೆಯ ಮತ್ತೊಂದು ಮಹೋನ್ನತ ಚಿತ್ರ. 1975ರಲ್ಲಿ ತೆರೆಕಂಡ, ಶಿವರಾಮ ಕಾರಂತರ ಕಾದಂಬರಿಯನ್ನು ಆಧರಿಸಿದ ಈ ಸಿನಿಮಾದ ಚೋಮನ ಪಾತ್ರದ ನಿರ್ವಹಣೆಗಾಗಿ ಎಂ.ವಿ. ವಾಸುದೇವರ ರಾವ್ ಅವರಿಗೆ ರಾಜ್ಯ– ಮತ್ತು ರಾಷ್ಟ್ರ ಪ್ರಶಸ್ತಿಗಳು ದೊರೆತವು. ಈ ಚಿತ್ರದಲ್ಲಿ ಸಹ ನಿರ್ದೇಶಕರಾಗಿ ಕೆಲಸ ಮಾಡಿದ ಗಿರೀಶ ಕಾಸರವಳ್ಳಿ ಮತ್ತು ಟಿ.ಎಸ್.ನಾಗಾಭರಣ ನಂತರದ ವರ್ಷಗಳಲ್ಲಿ ಉತ್ಕೃಷ್ಟ ಚಿತ್ರಗಳನ್ನು ನಿರ್ದೇಶಿಸಿದ್ದು, ಇವತ್ತಿಗೂ ಕನ್ನಡ ಚಿತ್ರರಂಗದ ಹೆಮ್ಮೆಯ ನಿರ್ದೇಶಕರಾಗಿ ಮುಂದುವರಿದಿದ್ದಾರೆ.

'ಘಟಶ್ರಾದ್ಧ' (1977) ಗಿರೀಶ ಕಾಸರವಳ್ಳಿ ನಿರ್ದೇಶನದ ಚೊಚ್ಚಲ ಸಿನಿಮಾ. 'ಸ್ವರ್ಣಕಮಲ' ಪುರಸ್ಕಾರಕ್ಕೆ ಪಾತ್ರವಾದ ಈ ಸಿನಿಮಾ ಮೂಲಕ ಗಿರೀಶರು ದೇಶದ ಅತ್ಯುತ್ತಮ ನಿರ್ದೇಶಕರ ಸಾಲಿಗೆ ಸೇರಿದರು. ಅವರ ನಿರ್ದೇಶನದ 'ತಬರನ ಕತೆ', 'ತಾಯಿಸಾಹೇಬ', 'ದ್ವೀಪ' ಚಿತ್ರಗಳು ಕೂಡ ಸ್ವರ್ಣಕಮಲ ರಾಷ್ಟ್ರೀಯ ಪುರಸ್ಕಾರ ಪಡೆದಿವೆ. 'ಹಸೀನಾ', 'ನಾಯಿ ನೆರಳು', 'ಗುಲಾಬಿ ಟಾಕೀಸ್', 'ಕನಸೆಂಬೊ ಕುದುರೆಯನೇರಿ', 'ಕೂರ್ಮಾವತಾರ' – ಇವೆಲ್ಲ ಕಾಸರವಳ್ಳಿ ಅವರ ಪ್ರಸಿದ್ಧ ಚಿತ್ರಗಳು.

ಸಿನಿಮಾ ಮೂಲಕ ಸಾಮಾಜಿಕ ಜಾಡ್ಯಗಳ ವಿರುದ್ಧ ದನಿ ಎತ್ತುವ ನಿರ್ದೇಶಕರಲ್ಲಿ ಬರಗೂರು ರಾಮಚಂದ್ರಪ್ಪ ಅವರದು ಪ್ರಮುಖ ಹೆಸರು. 'ಬೆಂಕಿ', 'ಕೋಟೆ', 'ಶಾಂತಿ', 'ತಾಯಿ',

27ನೇ ಪುಟಕ್ಕೆ



ಉಪೇಂದ್ರ

### ಸಾವಿರದ ಗುರುತು

ಸಾವಿರ ಎನ್ನುವುದು ಸಂಖ್ಯೆಯ ದೃಷ್ಟಿಯಿಂದಷ್ಟೇ ಮಹತ್ವದ್ದು. ಕನ್ನಡ ಸಿನಿಮಾಗಳ ಸಾವಿರದ ಹೆಜ್ಜೆಗುರುತುಗಳನ್ನು ಹೀಗೆ ಗುರುತಿಸಬಹುದು.

**1000**ನೇ ಚಿತ್ರ ದೇವರೆಲ್ಲಿದ್ದಾನೆ?
**2000**ನೇ ಚಿತ್ರ ಹ್ಯಾಟ್ಸ್ ಆಫ್ ಇಂಡಿಯಾ
**3000**ನೇ ಚಿತ್ರ ಕಿರಾತಕ